2) ಶ್ರೀರಂಗ ಅಣೆ

3) ರಂಗಮಾರೇನಕಲ್‌ಕೆರೆ – ತನಿಖಾ ಹಂತದಲ್ಲಿದೆ

4) ರಂಗಪ್ಪ ಡ್ಯಾಂ ಕೆರೆ

ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಕೆರೆಗಳಲ್ಲಿ ಹೂಳೆತ್ತುವ ಕಾರ್ಯಕ್ರಮ

2246 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿರುವ ಕೆರೆಗಳ ಸಂಖ್ಯೆ ಎಷ್ಟು? ತಾಲ್ಲೂಕುವಾರು ವಿವರ ನೀಡುವುದು)

ಆ) ಇವುಗಳಲ್ಲಿ ಹೂಳು ತುಂಬಿರುವ ಕೆರೆಗಳು ಎಷ್ಟೆಂದು ಗುರುತಿಸಲಾಗಿದೆಯೆ; (ತಾಲ್ಲೂಕಿನ ಪ್ರತಿಯೊಂದರ ಹೆಸರನ್ನು ತಿಳಿಸುವುದು)

ಇ) ಈ ಕೆರೆಗಳ ಹೂಳನ್ನು ತೆಗೆಯಲು ಸರ್ಕಾರದವರು ಯೋಜನೆಯನ್ನು ತಯಾರಿಸಿದ್ದಾರೆಯೇ;

ಈ) ಹಾಗಿದ್ದಲ್ಲಿ ಈ ಯೋಜನೆಗಾಗಿ ಒದಗಿಸಿರುವ ಮೊತ್ತವೆಷ್ಟು? (ತಾಲ್ಲೂಕುವಾರು ವಿವರ ನೀಡುವುದು)

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯವರು):

ಅ) 1026 ತಾಲ್ಲೂಕುವಾರು ವಿವರ ಕೆಳಗಿಂತಿದೆ:

1)	ಮಾಗಡಿ	159
2)	ನೆಲಮಂಗಲ	154
3)	ಹೊಸಕೋಟಿ	145
4)	ದೇವನಹಳ್ಳಿ	95
5)	ದೊಡ್ಡಬಳ್ಳಾಪುರ	150
6)	ಕನಕಪುರ	138
7)	ರಾಮನಗರಂ	77
8)	ಚನ್ನಪಟ್ಟಣ	108
	ಒಟ್ಟು	1026

ಆ) ಇಲ್ಲ

ಇ) ಕೆಲವು ಕೆರೆಗಳಲ್ಲಿನ ಭಾಗಶಃ ಹೂಳನ್ನು ತೆಗೆಯಲು ಯೋಜನೆಯನ್ನು ತಯಾರಿಸಲಾಗಿದೆ.

ಈ) ಯಾವ ಮೊತ್ತವನ್ನು ಒದಗಿಸಿಲ್ಲ.

ವಿಜಾಪುರ ತಾಲ್ಲೂಕಿನಲ್ಲಿ ಕೆರೆಗಳ ಮರಸ್ತಿ

1648 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ವಿಜಾಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಡುವ ಕೆರೆಗಳೆಷ್ಟು; ಮತ್ತು ಯಾವುವು;

ಅ) ಈ ಕೆರೆಗಳ ದುರಸ್ತಿಗಾಗಿ 1993-94 ಮತ್ತು 1994-95ರಲ್ಲಿ ಎಷ್ಟು ಖರ್ಚು ಮಾಡಲಾಗಿದೆ;

ಇ) ಪ್ರಸಕ್ತ ಸಾಲಿನಲ್ಲಿ ಮಂಜೂರಾತಿ ಸಿಕ್ಕ ಕೆರೆಗಳೆಷ್ಟು; ಅವು ಯಾವುವು;

ಈ) ಈ ಹೊಸ ಕೆರೆಗಳಿಗೆ 1995-96ರ ಸಾಲಿನ ಆಯವ್ಯಯದಲ್ಲಿ ತೆಗೆದಿರಿಸಿದ ಹಣವೆಷ್ಟು?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಸಣ್ಣ ನೀರಾವರಿ ರಾಜ್ಯ ಸಚಿವೆಯರು):

ಅ) 28 (ವಿವರ ಲಗತ್ತಿಸಿದೆ)

ಆ) 1993-94ರಲ್ಲಿ 13.32 ಲಕ್ಷ ರೂ.ಗಳು

1994-95ರಲ್ಲಿ 8.55 ಲಕ್ಷ ರೂ.ಗಳು

ಇ) ಯಾವುದೂ ಇಲ್ಲ

ಈ) ರೂ. 7.60 ಲಕ್ಷಗಳು

ರಾಜ್ಯದ ವಾಣಿಜ್ಯ ತೆರಿಗೆ ಕುರಿತು

1643 - ಶ್ರೀ ಬಸನಗೌಡ ಪಾಟೀಲ್ (ವಿಜಾಪುರ) : ಮಾನ್ಯ ಹಣಕಾಸು ಮತ್ತು ಯೋಜನಾ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಾಣಿಜ್ಯ ತೆರಿಗೆ ನೆರೆ ರಾಜ್ಯಗಳಿಗಿಂತ ಹೆಚ್ಚಾಗಿದ್ದು, ರಾಜ್ಯದ ಜನತೆಗೆ ಭಾರವಾಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ರಾಜ್ಯದಲ್ಲಿ ಬರುವ ಗಡಿ ಜಿಲ್ಲೆಗಳಲ್ಲಿ ಅಕ್ರಮವಾಗಿ ಸರಕು ಸಾಗಾಟವಾಗುತ್ತಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ಅಕ್ರಮ ವ್ಯವಹಾರಗಳಿಂದ ಆಗುತ್ತಿರುವ ನಷ್ಟವೆಷ್ಟು?

ಈ) ಗಡಿ ಪ್ರದೇಶಗಳಲ್ಲಿರುವ ವಾಣಿಜ್ಯ ತೆರಿಗೆ ಚೆಕ್‌ಪೋಸ್ಟ್‌ಗಳು ಭ್ರಷ್ಟಾಚಾರದಲ್ಲಿ ತೊಡಗಿರುವ ವಿಷಯ ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದಲ್ಲಿ ಈ ವಿಷಯಗಳಲ್ಲಿ ಸರ್ಕಾರದವರು ಕೈಗೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಹಣಕಾಸು ಮತ್ತು ಯೋಜನಾ ಸಚಿವರು) :

ಅ) ರಾಜ್ಯಗಳಲ್ಲಿನ ತೆರಿಗೆ ದರಗಳಲ್ಲಿ ವ್ಯತ್ಯಾಸವಿರುವುದು ನಿಜವಾದರೂ ಕೆಲವೊಂದು ಪ್ರಮುಖ ವಸ್ತುಗಳಿಗೆ ಸಂಬಂಧಿಸಿದಂತೆ ಸಾಧ್ಯವಾದ ಮಟ್ಟಿನ ಸಾಮ್ಯತೆಯನ್ನು ತರಲಾಗಿದೆ.

ಆ) ಇಲ್ಲ. ಅಂತಹ ಪ್ರಕರಣಗಳು ಕಂಡು ಬಂದಲ್ಲಿ ನಿಯಮಗಳನ್ವಯ ಕ್ರಮ ಜರುಗಿಸಲಾಗುವುದು.

ಇ) ಉದ್ಭವಿಸುವುದಿಲ್ಲ

ಈ) ಸರ್ಕಾರದ ಗಮನಕ್ಕೆ ಬಂದಂತಹ ನಿರ್ದಿಷ್ಟ ಪ್ರಕರಣಗಳಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.

ಗೋಕಾಕ್ ತಾಲ್ಲೂಕಿನಲ್ಲಿ ಕೆರೆಗಳ ಹೂಳೆತ್ತುವುದು.

2533 - ಶ್ರೀ ಚಂದ್ರಶೇಖರ್ ನಾಯಕ್ (ಗೋಕಾಕ್) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವೆಯರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಳಗಾವಿ ಜಿಲ್ಲೆಯ, ಗೋಕಾಕ್ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಗೆ ಒಳಪಟ್ಟ ಯೋಜನೆಗಳೆಷ್ಟು;

ಆ) 1995-96ರಲ್ಲಿ ಗೋಕಾಕ್ ತಾಲ್ಲೂಕಿನಲ್ಲಿ ಮಂಜೂರಾದ ಯೋಜನೆಗಳೆಷ್ಟು?